ಇದಲ್ಲದೆ ಬಿಳಿಗಿರಿರಂಗನ ಬೆಟ್ಟದಲ್ಲಿ ಒಂದು ಉಪಹಾರ ಗೃಹವನ್ನು ನಿರ್ಮಿಸಲಾಗಿದ್ದು ಇದನ್ನು ಖಾಸಗೀಕರಣಗೊಳಿಸಲಾಗಿದೆ. ಹಾಗೂ ಇಲ್ಲಿ ಒಂದು ಯಾತ್ರಿ ನಿವಾಸವನ್ನು ನಿರ್ಮಿಸಲು ಯೋಜನೆಯನ್ನು

ಪ್ರಶ್ನೆ ಸಂಖ್ಯೆ : (187) 36 ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ)

ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

1. ಕೊಳ್ಳೇಗಾಲ ಮತ್ತು ಯಳಂದೂರು ಪಟ್ಟಣಗಳಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದೇ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಈ ದಿಸೆಯಲ್ಲಿ ಮನವಿಗಳನ್ನು ಸಲ್ಲಿಸಿದಾಗ್ಯೂ ಇದುವರೆವಿಗೂ ಕೆಲಸಗಳನ್ನು ಪ್ರಾರಂಭಿಸದಿರಲು ಕಾರಣಗಳೇನು?

3. ಎಂದಿನಿಂದ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗುವುದು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ ಮಾನ್ಯ ಮುಖ್ಯಮಂತ್ರಿ

1) ಹೌದು

2) ಕೊಳ್ಳೇಗಾಲ ಪಟ್ಟಣದಲ್ಲಿ ಹಾಲಿ ಶೇಕಡ 40 ರಷ್ಟು ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆ ಇದ್ದು, ಇನ್ನು ಉಳಿದ ಭಾಗಕ್ಕೆ ಸಮಗ್ರ ಒಳಚರಂಡಿ ಯೋಜನೆಯನ್ನು ಕಲ್ಪಿಸಲು ಸರ್ವೆ ಕಾಮಗಾರಿಗೆ ಬೇಕಾಗುವ ಹಣವನ್ನು ನಗರಸಭೆ ಕೊಳ್ಳೇಗಾಲ ಇವರು ದಿನಾಂಕ : 24–03–2007ರಲ್ಲಿ ರೂ. 2.00 ಲಕ್ಷಗಳನ್ನು ಹಾಗೂ ದಿನಾಂಕ : 22–05–2007ರಲ್ಲಿ ರೂ. 3.00 ಲಕ್ಷಗಳನ್ನು ಮಂಡಳಿಗೆ ಪಾವತಿಸಿರುತ್ತಾರೆ. ಸದರಿ ಒಳಚರಂಡಿ ಯೋಜನೆ ಕಲ್ಪಿಸಲು ಸರ್ವೆ ಕಾರ್ಯ ಪ್ರಗತಿಯಲ್ಲಿದೆ. ಯಳಂದೂರು ಪಟ್ಟಣಕ್ಕೆ ಒಳಚರಂಡಿ ಅಳವಡಿಸಬೇಕಾದರೆ ನೀರು ಸರಬರಾಜು ಕನಿಷ್ಠ ತಲಾ ದಿನಂಪ್ರತಿ 100 ಲೀಟರ್ ಇರಬೇಕಾಗುತ್ತದೆ. ಈಗ ತಲಾ ದಿನಂಪ್ರತಿ 30 ಲೀಟರ್ ಮಾತ್ರ ಇರುತ್ತದೆ. ಆದ್ದರಿಂದ, ಈಗ ನೀರು ಸರಬರಾಜು ಯೋಜನೆಯಡಿ ರೂ. 747.00 ಲಕ್ಷಗಳ ಅಂದಾಜಿಗೆ ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿದ್ದು,

ಕಾಮಗಾರಿಗಳು ಪ್ರಗತಿಲ್ಲಿವೆ. ನೀರು ಸರಬರಾಜು ಯೋಜನೆಯನ್ನು ಚಾಲನೆಗೊಳಿಸಿದ ನಂತರ, ಒಳಚರಂಡಿ ಮಂಡಳಿಯು ಅಂದಾಜು ತಯಾರಿಸಿದ ನಂತರ ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಹಾಗೂ ಮೂಲಭತ್ಯೆಗೆ ಅನುಗುಣವಾಗಿ ಪರಿಶೀಲಿಸಲಾಗುವುದು.

3) ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನ ತೊಂದರೆ ಬಗ್ಗೆ.

ಪ್ರಶ್ನೆ ಸಂಖ್ಯೆ : (188) ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ)

ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಕೊಳ್ಳೇಗಾಲ ತಾಲ್ಲೂಕಿನ ಕುಂತೂರು ಮತ್ತು ಬಸ್ತೀಪುರ ಗ್ರಾಮಗಳಲ್ಲದೇ ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನ ಬೆಟ್ಟದಪ್ರದೇಶಗಳಲ್ಲಿನ ವಿದ್ಯುತ್ ಸರಬರಾಜಿನಲ್ಲಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ತೊಂದರೆಯನ್ನು ನಿವಾರಿಸಲು ಈ ಸ್ಥಳಗಳಲ್ಲಿ ಉಪ ವಿದ್ಯುತ್ ಕೇಂದ್ರಗಳನ್ನು ತೆರೆಯಲು ಕೋರಿಕೆ ಸಲ್ಲಿಸಿದಾಗ್ಯೂ ಇದುವರೆವಿಗೂ ಉಪವಿದ್ಯುತ್ ಕೇಂದ್ರಗಳನ್ನು ಪ್ರಾರಂಭಿಸದಿರಲು ಕಾರಣಗಳೇನು;

ಇ) ಮೇಲ್ಕಂಡ ಸ್ಥಳಗಳಲ್ಲಿ ಯಾವಾಗ ಈ ಕೇಂದ್ರಗಳನ್ನು ತೆರೆಯಲಾಗುವುದು?

ಶ್ರೀ ಹೆಚ್.ಡಿ.ರೇವಣ್ಣ ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು

ಅ) ಹೌದು.

ಆ) ಮತ್ತು ಇ) ಕೊಳ್ಳೇಗಾಲ ತಾಲ್ಲೂಕಿನ ಕುಂತೂರು ಗ್ರಾಮದಲ್ಲಿ ಒಂದು 66/11 ಕೆ.ವಿ. ವಿದ್ಯುತ್ ಉಪಕೇಂದ್ರದ ಸ್ಥಾಪನೆ ಬಗ್ಗೆ ಪ್ರಸ್ತಾಪನೆಯನ್ನು